ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್

ಶ್ರೀ ಬಿ.ಆರ್. ಸಿದ್ದರಾಮು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 40512/2019 (ಎಲ್ಬಿ-ಆರ್ಇಎಸ್), ದಿನಾಂಕ 19 ನೇ ಡಿಸೆಂಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್:

ಅವಿಶ್ವಾಸ ನಿರ್ಣಯವನ್ನು ಪರಿಗಣಿಸುವ ದಿನಾಂಕವಾಗಿ 13.09.2019 ನ್ನು ನಿಗದಿಪಡಿಸಿರುವದಿನಾಂಕ: 26.08.2019 ರ ಅನುಬಂಧ-ಬಿ ಯಲ್ಲಿ ಸಹಾಯಕ ಆಯುಕ್ತರ ನೋಟೀಸಿನಿಂದ ಬಾಧಿತರಾಗಿ, ಗೊಲ್ಲಹಳ್ಳಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿರುವ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.ಅರ್ಜಿದಾರರು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ) ನಿಯಮಗಳು, 1994 ರ (ಸಂಕ್ಷಿಪ್ತವಾಗಿ ' ನಿಯಮಗಳು) 3 ( 1), 3 ( 2) ಮತ್ತು 3 ( 4) ನೇ ನಿಯಮವು ಮೂಲ ಅಧಿನಿಯಮದ ಅಧಿಕಾರಕ್ಕೆ ಮೀರಿದ್ದಾಗಿದೆ ಎಂಬ ಘೋಷಣೆಯನ್ನು ಮಾಡಬೇಕೆಂದು ಕೋರಿದ್ದಾರೆ.

2. ಸಂಬಂಧಿತ ಸಂಗತಿಗಳು ಏನೆಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ (ಸಂಕ್ಷಿಪ್ತವಾಗಿ ' ಅಧಿನಿಯಮ) 49 ( 1) ನೇ ಪ್ರಕರಣದ ಪ್ರಕಾರ, ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತೆ ಕೋರಿದ್ದಾರೆ.ಮೂರನೇ ಪ್ರತ್ಯರ್ಜಿದಾರ ಗ್ರಾಮ ಪಂಚಾಯತ್ ಸದಸ್ಯರು ಎರಡನೇ ಪ್ರತ್ಯರ್ಜಿದಾರ ವಿಭಾಗಾಧಿಕಾರಿಯವರ ಬಳಿದಿನಾಂಕ: 19.08.2019 ರಂದು ಅನುಬಂಧ- ಎ ನಲ್ಲಿ ದೂರನ್ನು ದಾಖಲಿಸಿದ್ದರು.

3. ಅಧಿನಿಯಮದ 49 ನೇ ಪ್ರಕರಣದಡಿ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ಸಂಬಂಧಿಸಿದ ಸಭೆ ಕರೆಯುವ ಅಥವಾ ಅಧ್ಯಕ್ಷತೆ ವಹಿಸಲು ವಿಭಾಗಾಧಿಕಾರಿಯು ಪ್ರಾಧಿಕಾರವಲ್ಲ ಎಂದು ವಾದಿಸಲಾಗಿದೆ.ಅದರ ಪರಿಣಾಮವಾಗಿ, ಆ ವಿಷಯದಲ್ಲಿ ವಿಭಾಗಾಧಿಕಾರಿಗೆ ಅಧಿಕಾರವನ್ನು ನೀಡುವ ನಿಯಮಗಳು ಅಧಿನಿಯಮದ ಅಧಿಕಾರಕ್ಕೆ ಮೀರಿದ್ದಾಗಿವೆ.

4. 62 ನೇ ಪ್ರಕರಣದ ಅಡಿಯಲ್ಲಿ ಸಭೆಯನ್ನು ನಡೆಸುವ ಉದ್ದೇಶಕ್ಕಾಗಿ ಈ ಅಧಿನಿಯಮವು ಒಂದು ನಿರ್ದಿಷ್ಟ ಕಾರ್ಯವಿಧಾನವನ್ನು ಉಪಬಂಧಿಸುತ್ತದೆ.ಅಧ್ಯಕ್ಷರು ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುವುದರಿಂದ ಅವರಿಗೆ ಸಭೆಯನ್ನು ಕರೆಯುವ ಅಧಿಕಾರವನ್ನು ನೀಡಲಾಗಿದೆ.ಆದರೆ, 52 ನೇ ಪ್ರಕರಣದ ಅಡಿಯಲ್ಲಿ ಕಾರ್ಯಕಲಾಪಗಳ ವ್ಯವಹರಣೆಗೆ ಸಭೆಯನ್ನು ಅಧ್ಯಕ್ಷರು ಕರೆಯಬೇಕಿರುತ್ತದೆ ಎಂದು ಅರ್ಜಿದಾರರರು ವಾದಿಸಿದ್ದಾರೆ.ಆದ್ದರಿಂದ, ವಿಭಾಗಾಧಿಕಾರಿಯು ಅವಿಶ್ವಾಸ ನಿರ್ಣಯವನ್ನು ಪರಿಗಣಿಸಲು ಸಭೆಯನ್ನು ಕರೆಯುವುದಕ್ಕಾಗಿ ಉಪಬಂಧಿಸಲಾದ, ಈ ಅಧಿನಿಯಮದ ಅಡಿಯಲ್ಲಿ ರೂಪಿಸಲಾದ ನಿಯಮಗಳನ್ನು ಮೂಲ ಅಧಿನಿಯಮದಲ್ಲಿ ರೂಪಿಸಿರಲಿಲ್ಲ ಹಾಗೂ ಆ ನಿಟ್ಟಿನಲ್ಲಿ ರೂಪಿಸಲಾದ ಈ ನಿಯಮಗಳು ಅಧಿನಿಯಮದ ಅಧಿಕಾರಕ್ಕೆ ಮೀರಿದ್ದಾಗಿವೆ ಹಾಗೂ ಶೂನ್ಯಗೊಳಿಸಲು ತಕ್ಕದ್ದಾಗಿವೆ ಎಂದು ವಾದಿಸಲಾಗಿದೆ.

5. ಅಷ್ಟೇ ಅಲ್ಲದೆ, ವಿಭಾಗಾಧಿಕಾರಿಯು, ಪರಿಗಣನೆಗಾಗಿನ ನಿರ್ಣಯವನ್ನು ಗ್ರಾಮಪಂಚಾಯತಿಯ ಸದಸ್ಯರಿಗೆ ಓದಿಹೇಳತಕ್ಕದ್ದೆಂದು ಮತ್ತು ಅದನ್ನು ಮತಕ್ಕೆ ಹಾಕತಕ್ಕದ್ದೆಂದು ಹೇಳಿ [ 3 ( 7)] ಅವೆಲ್ಲವೂ ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಲು ವಿಭಾಗಾಧಿಕಾರಿಗೆ ನಿಯಮಗಳು ಅವಕಾಶ ಕಲ್ಪಿಸಿದ್ದು [ನಿಯಮ 3 ( 4)] ಮೂಲ ಅಧಿನಿಯಮದ ಅಧಿಕಾರಕ್ಕೆ ಮೀರಿದ್ದಾಗಿದೆಯೆಂದು ಹೇಳಲಾಗಿದೆ ಎಂದು ವಾದಿಸಲಾಗಿದೆ.

6. ಮುಂದುವರೆದು, ರೂಪಿಸಲಾದ ನಿಯಮಗಳು, ನಿಯಮಗಳನ್ನು ರೂಪಿಸುವ ಅಧಿಕಾರವನ್ನು ನೀಡುವ ಅಧಿನಿಯಮದ 311 ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾಗಿವೆ ಎಂದು ವಾದಿಸಲಾಗಿದೆ.

7. ಅರ್ಜಿದಾರರ ಪರ ಮಾನ್ಯ ವಕೀಲರು ಮೆಸರ್ಸ್ ಭಾರತ್ ಬ್ಯಾರೆಲ್ ಅಂಡ್ ಡ್ರಮ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಅಮಿಟೆಡ್ ಮತ್ತು ಇನ್ನೊಬ್ಬರು-ವಿರುದ್ಧ ಎಂಪ್ಲಾಯೀಸ್, 9 ಸ್ಟೇಟ್ ಇನ್ಶೂರೆನ್ಸ್ ಕಾರ್ಪೊರೇಷನ್ 1 ' ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.ಒಂದು ಅರ್ಜಿಯನ್ನು ಸಲ್ಲಿಸಬೇಕಾದ ಕಾಲ ಪರಿಮಿತಿಯ ಅವಧಿಯನ್ನು ನಿಗದಿಪಡಿಸುವ ನಿಯಮವು, ಕಾನೂನಿನ ಅಡಿಯಲ್ಲಿ ನೀಡಲಾದ ಹಕ್ಕನ್ನು ಅಂತ್ಯಗೊಳಿಸುವ ಪರಿಣಾಮವನ್ನು ಹೊಂದಿರುತ್ತದೆ ಮತ್ತು ಹೀಗಾಗಿ, ಅಂತಹ ನಿಯಮವು ನಿಯಮ ರಚನಾ ಪ್ರಾಧಿಕಾರದಿಂದ ಹೊರಗಿರುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ ತೀರ್ಮಾನಿಸಿದೆ ಚ ಎಂದು ವಾದಿಸಲಾಗಿದೆ.

8. ಶಾಸನಾತ್ಮಕ ಉಪಬಂಧಗಳನ್ನು ವಿರೋಧಿಸಲು ಲಭ್ಯವಿರುವ ಅದೇ ಆಧಾರಗಳ ಮೇಲೆ, ಅಧೀನ ಶಾಸನವನ್ನು ಸಹ ತೆಗೆದುಹಾಕಬಹುದು ಎಂದು ವಾದಿಸಲು, ಇಂಡಿಯನ್ ಎಕ್ಸ್ಪ್ರೆಸ್ ನ್ಯೂಸ್ ಪೇಪರ್ (ಬಾಂಬೆ) ಪ್ರೈವೇಟ್ ಅಮಿಟೆಡ್ ಮತ್ತು ಇತರರು -ವಿರುದ್ಧ ಯೂನಿಯನ್ ಆಫ್ ಇಂಡಿಯಾ ಹಾಗೂ ಇತರರು ಐಎಲ್ಆರ್ 1997 ಕೆಎಆರ್ 677 ಪ್ರಕರಣದ ತೀರ್ಪನ್ನು ಸಹ ಅರ್ಜಿದಾರರು ಅವಲಂಬಿಸಿದ್ದಾರೆ.

9. ಎಂ. ಮುನಿಯಪ್ಪ ಮತ್ತು ಇನ್ನೊಬ್ಬರು ವಿರುದ್ಧ ಕರ್ನಾಟಕ ರಾಜ್ಯ ಹಾಗೂ ಇತರರು ಐಎಲ್ಆರ್ 1997 ಕೆಎಆರ್ 677 ಪ್ರಕರಣದಲ್ಲಿ ಪರಿಗಣಿಸಲಾದಂತೆ ನಿಯಮಗಳೊಂದಿಗೆ ಓದಲಾದ ಅಧಿನಿಯಮದ 49 ನೇ ಪ್ರಕರಣವು ತಮ್ಮಷ್ಟಕ್ಕೆ ಒಂದು ಸಂಪೂರ್ಣವಾದ ಸಂಹಿತೆಯಾಗಿವೆ ಎಂದು ಪ್ರತ್ಯರ್ಜಿದಾರ ರಾಜ್ಯದ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ ರವರು ನಿವೇದಿಸಿರುತ್ತಾರೆ ಮತ್ತು ಆದ್ದರಿಂದ, ಗ್ರಾಮ ಪಂಚಾಯತಿಯ ಸಭೆಯನ್ನು ಕರೆಯುವುದಕ್ಕಾಗಿ ಅಧಿನಿಯಮದ 52 ಅಥವಾ 62 ನೇ ಪ್ರಕರಣದ ಅಡಿಯಲ್ಲಿ ಕಾರ್ಯ ವಿಧಾನವನ್ನು ಅವಲಂಬಿಸುವುದು ಅನುಮತೀಯವಲ್ಲ ಎಂದು ವಾದಿಸಲಾಗಿದೆ.

10. ಅಷ್ಟೇ ಅಲ್ಲದೆ, ಅಧಿನಿಯಮದ 52 ನೇ ಪ್ರಕರಣವು ಕಾರ್ಯಕಲಾಪಗಳ ವ್ಯವಹರಣೆಗೆ ಸಂಬಂಧಿಸಿದ ಕಾರ್ಯವಿಧಾನವನ್ನು ಉಪಬಂಧಿಸುತ್ತದೆ ಮತ್ತು ಅಂತಹ ಸಭೆಯನ್ನು ಒಟ್ಟು ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಲಿಖಿತ ಕೋರಿಕೆಯ ಮೇರೆಗೆ ಹಾಗೂ ಅಂತಹ ಕೋರಿಕೆಯನ್ನು ಸ್ವೀಕರಿಸಿದಾಗಿನಿಂದ 15 ದಿನಗಳೊಳಗಿನ ದಿನಾಂಕದಂದು ಮಾತ್ರ ನಡೆಸಲಾಗುತ್ತದೆ ಎಂದು ವಾದಿಸಲಾಗಿದೆ.49 ನೇ ಪ್ರಕರಣದ ಅವಗಾಹನೆಯಿಂದ ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಸಭೆ ಕರೆಯುವುದಕ್ಕೆ ಸಂಬಂಧಿಸಿದಂತೆ, ಶಾಸಕಾಂಗದ ಉದ್ದೇಶವು ವಿಭಿನ್ನ ಕಾರ್ಯವಿಧಾನವನ್ನು ಅನುಸರಿಸುತ್ತದೆ ಎಂಬುದನ್ನು ಸೂಚಿಸುತ್ತದೆ ಎಂದು ಎತ್ತಿ ತೋರಿಸಲಾಗಿದೆ.ಅಧಿನಿಯಮದ 49 ( 1) ನೇ ಪ್ರಕರಣದ ಕಡೆಗೆ ಗಮನ ಸೆಳೆಯುತ್ತಾ,

ಅವಿಶ್ವಾಸ ನಿರ್ಣಯವನ್ನು ಮಂಡಿಸಲು ನಿರ್ಣಯದ ನೋಟೀಸು ಒಟ್ಟು ಸದಸ್ಯರ ಸಂಖ್ಯೆಯ ಅರ್ಧದಷ್ಟು ಸದಸ್ಯರಿಂದ ಹಾಗೂ 10 ದಿನಗಳ ಸೂಚನೆಯೊಂದಿಗೆ ನೀಡಲ್ಪಟ್ಟಿದೆ ಎಂದು ನಿವೇದಿಸಲಾಗಿದೆ.ಅದರಂತೆ, 49 ನೇ ಮತ್ತು 52 ನೇ ಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದ ಕಾರ್ಯವಿಧಾನವು ಹೊರನೋಟಕ್ಕೆ ಭಿನ್ನವಾಗಿದೆ ಮತ್ತು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಕರೆಯಲ್ಪಟ್ಟ ಸಭೆಯು ಅಧಿನಿಯಮದ 52 ನೇ ಪ್ರಕರಣದ ಅಡಿಯಲ್ಲಿನ ಕಾರ್ಯವಿಧಾನವನ್ನು ಅನುಸರಿಸಬೇಕಿತ್ತು ಎಂದು ಅದನ್ನು ಅರ್ಥೈಸಿಕೊಳ್ಳಬೇಕಾದರೆ, 0 ಅದು ಅಧಿನಿಯಮದಲ್ಲಿ ಅಂತರ್ಗತ ವಿರೋಧಾಭಾಸಕ್ಕೆ ಕಾರಣವಾಗುತ್ತದೆ ಹಾಗೂ ಅದನ್ನು ಊಹಿಸಲೂ ಆಗದು ಎಂಬುದನ್ನು ಒತ್ತಿಹೇಳಲಾಗಿದೆ.

11. ಅದಷ್ಟೇ ಅಲ್ಲದೆ, ನಿರ್ಬಂಧಿತ ಕಾರಣಗಳನ್ನು ಹೊರತುಪಡಿಸಿ, ಬೈಲಾಗಳನ್ನು ತೆಗೆದುಹಾಕುವಲ್ಲಿ ನ್ಯಾಯಾಲಯಗಳು ನಿಧಾನವಾಗಿರಬೇಕು ಎಂದು ವಾದಿಸಲಾಗಿದೆ ಮತ್ತು ಓಂ ಪ್ರಕಾಶ್ ಮತ್ತು ಇತರರು ವಿರುದ್ಧ ಉತ್ತರ ಪ್ರದೇಶ ರಾಜ್ಯ ಹಾಗೂ ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದೆ.ರೂಪಿಸಲಾದ ವಿನಿಯಮಗಳು ಶಾಸನದ ಮೂಲಕ ಪ್ರತಿನಿಧಿಗೆ ನೀಡಲಾದ ರಚನಾಧಿಕಾರದ ವ್ಯಾಪ್ತಿಯೊಳಗೆ ಬರುತ್ತವೆಯೇ?ಎಂಬ ಬಗ್ಗೆ ಮತ್ತು ಕಾನೂನಿನಲ್ಲಿ ಕಂಡುಬರುವಂತೆ ಕಾರ್ಯನೀತಿಯ ಗುಣಾವಗುಣಗಳನ್ನು ಪರೀಕ್ಷಿಸುವುದು ಹಾಗೂ ಶಾಸನವನ್ನು ಅನುಷ್ಠಾನಗೊಳಿಸುವ ಕಾರ್ಯವಿಧಾನವನ್ನು ತಿಳಿಸುವ ನಿಯಮಗಳನ್ನು ವಿಚಾರಿಸುವುದು ನ್ಯಾಯಾಲಯದ ಕೆಲಸವಲ್ಲ ಎಂಬ ಬಗ್ಗೆ ಪರಿಶೀಲಿಸುವುದಕ್ಕೆ ನ್ಯಾಯಾಲಯದ ಅಧಿಕಾರವು ಸೀಮಿತವಾಗಿದೆ ಎಂದು ೧ ವಾದಿಸಲು ಮಹಾರಾಷ್ಟ್ರ ಸ್ಟೇಟ್ ಬೋರ್ಡ್ ಆಫ್ ಸೆಕೆಂಡರಿ ಅಂಡ್ ಹೈಯರ್ ಸೆಕೆಂಡರಿ ಎಜುಕೇಶನ್ ಮತ್ತು ಇನ್ನೊಬ್ಬರು ವಿರುದ್ಧ ಪಾರಿತೋಷ್ ಭೂಪೇಶ್ ಕುಮಾರ್ ಸೇಲ್ ಮತ್ತು ಇತರರು ಎಐಆರ್ 1984 ಎಸ್ಸಿ 1543 ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ಚ ನ್ಯಾಯಾಲಯದ ತೀರ್ಪನ್ನೂ ಸಹ ಅವಲಂಬಿಸಲಾಗಿದೆ.

12. ಅಷ್ಟೇ ಅಲ್ಲದೆ, ಶಾಸಕಾಂಗವು ನಿಗದಿಪಡಿಸಿದ ಅತ್ಯಗತ್ಯವಾದ ಎ ಮಾರ್ಗಸೂಚಿಗಳಲ್ಲಿ ಪೂರಕ ಮತ್ತು ಸಹಾಯಕ ವಿವರಗಳಿಗಾಗಿ ಮಾತ್ರ ನಿಯಮಗಳು ಅವಕಾಶ ಕಲ್ಪಿಸುತ್ತವೆ ಮತ್ತು ಪ್ರಸ್ತುತ ಮೊಕದ್ದಮೆಯಲ್ಲಿ ಅಧಿನಿಯಮದ 49 (1) ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ, ಅವಿಶ್ವಾಸ ನಿರ್ಣಯವನ್ನು ಪರಿಗಣಿಸುವ ಕಾರ್ಯವಿಧಾನವನ್ನು ನಿಯಮಗಳು ತಿಳಿಸುತ್ತವೆ ಮತ್ತು ಆದ್ದರಿಂದ, 0 ಪ್ರತಿನಿಧಿಯ ಮೇಲೆ ಅಗತ್ಯ ಶಾಸನಾಧಿಕಾರದ ಅತ್ಯಧಿಕ ನಿಯೋಜನೆಯನ್ನು ವಹಿಸಲಾಗಿಲ್ಲ ಎಂದು ವಾದಿಸಲಾಗಿದೆ.ಮೆಸರ್ಸ್ ಟಾಟಾ ಐರನ್ ಅಂಡ್ ಸ್ಟೀಲ್ ಕಂ.ಅ. -ವಿರುದ್ಧ-ಮೆಸರ್ಸ್ ಟಾಟಾ ಐರನ್ ಅಂಡ್ ಸ್ಟೀಲ್ ಕಂ.ಅ.ನ ಕಾರ್ಮಿಕರು ಹಾಗೂ ಇತರರು ಎಐಆರ್ 1972 ಎಸ್ಸಿ 1917 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಚ ಅವಲ ೦ ಬಿಸಲಾಗಿದೆ.

13. ಎರಡೂ ಕಡೆಗಳ ವಾದಗಳನ್ನು ಆಲಿಸಿದ ನಂತರ, ಪರಿಗಣನೆಗೆ ಬರುವ ಪ್ರಶ್ನೆಯು ಹೀಗಿದೆ:

" ಸದಸ್ಯರು ಮಂಡಿಸಿದ ಅವಿಶ್ವಾಸ ನಿರ್ಣಯವನ್ನು ಪರಿಗಣಿಸಲು ಸಭೆ ಕರೆಯಲು ವಿಭಾಗಾಧಿಕಾರಿಗೆ ಅವಕಾಶ ಕಲ್ಪಿಸುವ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ) ನಿಯಮಗಳು, 1994 ರ 3 ನೇ ನಿ ೦ ತವವು, ಮೂಲ ಶಾಸನದ ಅಧಿ ಕಾರಕ್ಕೆ 9 ಮೀರಿದ್ದಾಗಿದೆಯೇ? '

14. ಅರ್ಜಿದಾರನು ಮ ೦ ಡಿಸಿದ ವಾದಗಳಿ ೦ ದ, ಸಭೆ ಕರೆಯುವ ಅಧಿಕಾರದೊಂದಿಗೆ ನಿಹಿತವಾದ ಪ್ರಾಧಿಕಾರವನ್ನಾಗಿ ವಿಭಾಗಾಧಿಕಾರಿಯನ್ನು ಎಂದೂ ಉದ್ದೇಶಿಸಿರಲಿಲ್ಲ ಎಂದು ಅರ್ಜಿದಾರನು ವಾದಿಸಿದ್ದಾನೆಂಬುದು ಸ್ಪಷ್ಟವಾಗಿರುತ್ತದೆ.ಆದಾಗ್ಯೂ, ಅಧಿನಿಯಮದ 49 ( 1) ನೇ ಪ್ರಕರಣವನ್ನು ಮತ್ತು ನಿಯಮಾವಳಿಗಳ 3 ನೇ ನಿಯಮವನ್ನು ಎಚ್ಚರಿಕೆಯಿಂದ ಅವಲೋಕಿಸಿದ ಮೇಲೆ, ಅಧಿನಿಯಮದ 49 ( 1) ನೇ ಪ್ರಕರಣವು ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಸದಸ್ಯರ ಸ್ಥಿರ ಹಕ್ಕನ್ನು ಸೂಚಿಸುತ್ತಿದ್ದು, ನಿಯಮಗಳು ಅಂತಹ ಹಕ್ಕನ್ನು ಜಾರಿಗೊಳಿಸಲು ಮಾತ್ರ ಸಹಾಯಕವಾಗಿವೆ ಮತ್ತು ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಸದಸ್ಯರ ಹಕ್ಕಿನ ಪ್ರತಿಪಾದನೆಗೆ ಪರಿಣಾಮ ಬೀರುವ ಸಲುವಾಗಿ ಸಭೆ ಕರೆಯುವ ಕಾರ್ಯವಿಧಾನವನ್ನು ಉಪಬಂಧಿಸುತ್ತವೆ ಎಂಬುದು ಸ್ಪಷ್ಟವಾಗುತ್ತದೆ.ವಾಸ್ತವವಾಗಿ, ವಿಭಾಗಾಧಿಕಾರಿಯು ಕೇವಲ ಆಡಳಿತಾತ್ಮಕ ಕಾರ್ಯನಿರ್ವಾಹಕನಾಗಿರುತ್ತಾನೆ ಮತ್ತು ಅವಿಶ್ವಾಸ ನಿರ್ಣಯದ ಸಭೆ ಕರೆಯುವಾಗ ಅವರಿಗೆ ಯಾವುದೇ ನ್ಯಾಯಿಕ ಸ್ವರೂಪದ ಅಧಿಕಾರವನ್ನು ನೀಡಲಾಗಿಲ್ಲ.ನಿಯಮಿಸಬಹುದಾದಂತಹ ಕಾರ್ಯವಿಧಾನಕ್ಕೆ ಅನುಗುಣವಾಗಿ ಅವಿಶ್ವಾಸ ನಿರ್ಣಯದ ಸಭೆಯನ್ನು ಕರೆಯಬಹುದೆಂದು ಮೂಲ ಅಧಿನಿಯಮವು ನಿರ್ದಿಷ್ಟಪಡಿಸುವುದರಿಂದ ಮತ್ತು ರೂಪಿಸಲಾದ ನಿಯಮಗಳನ್ನು, ಅಧಿನಿಯಮದ 311 ನೇ ಪ್ರಕರಣದೊಂದಿಗೆ ಓದಲಾದ 49 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರೂಪಿಸಲಾಗಿದೆಯೆಂದು ನಿರ್ದಿಷ್ಟವಾಗಿ ಹೇಳಲಾಗಿರುವುದರಿಂದ, ತದನುಸಾರವಾಗಿ, ಮೂಲ ಶಾಸನದ ಅಡಿಯಲ್ಲಿ ಅಧಿಕಾರವನ್ನು ನೀಡುವುದಕ್ಕೆ ಅನುಗುಣವಾಗಿ ನಿಯಮಗಳನ್ನು ರೂಪಿಸಲಾಗಿದೆ ಮತ್ತು ಆದ್ದರಿಂದ ನೀಡಲಾದ ಅಧಿಕಾರಕ್ಕಿಂತ ಹೆಚ್ಚಿನದನ್ನು ಹೊಂದಲು ಸಾಧ್ಯವಿಲ್ಲ.

15. ಅರ್ಜಿದಾರನು ಮೆಸರ್ಸ್ ಭಾರತ್ ಬ್ಯಾರೆಲ್ ಮತ್ತು ಡ್ರಮ್ ಮ್ಯಾನುಫ್ಯಾಕ್ಚರಿಂಗ್ ಮತ್ತು ಕಂ. ಅಮಿಟೆಡ್ನ (ಮೇಲೆ ಹೇಳಿದ) ಪ್ರಕರಣದ ಮೇಲೆ ಅವಲಂಬಿತನಾಗಿದ್ದು, ಅದು ಅರ್ಜಿದಾರನ ವಾದವನ್ನು ಸಮರ್ಥಿಸುವುದಿಲ್ಲ.ಈ ಪ್ರಕರಣದ ಸಂಗತಿಗಳೆಂದರೆ, ನೌಕರರ ರಾಜ್ಯ ವಿಮಾ ಅಧಿನಿಯಮ, 1948 ರ 96 ( 1) ನೇ ಪ್ರಕರಣವು ನ್ಯಾಯಾಲಯಗಳ ಮುಂದೆ ಇರುವ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ನಿಯಮಗಳನ್ನು ರೂಪಿಸುವ ಸಲುವಾಗಿ ಉಪಬಂಧಿಸಿದೆ ಎಂಬುದಾಗಿತ್ತು.ಪರಿಗಣನೆಗೆ ಉದ್ಭವಿಸಿದ ಪ್ರಶ್ನೆಯೆಂದರೆ, ಪರಿಮಿತಿಯನ್ನು ನಿಗದಿಪಡಿಸಿದ ಈ ನಿಯಮವು ಒಂದು ಅಧೀನ ಶಾಸನವಾಗಿದ್ದು, ಅದು ಕಾನೂನಿನ ಅಡಿಯಲ್ಲಿ ನೀಡಲಾದ ಪ್ರಮುಖ ಹಕ್ಕಿನ ಮೇಲೆ ಪರಿಣಾಮ ಬೀರುವುದಕ್ಕೆ ಸಮಾನವಾದುದೇ?ಎಂಬುದಾಗಿದೆ.

"14. ಶಾಸಕಾಂಗವು ಅದರ ಅಡಿಯಲ್ಲಿ ಉದ್ಭವಿಸುವ ಕ್ಲೇಮುಗಳಿಗೆ ಸಂಬಂಧಿಸಿದಂತೆ ಕಾಲಪರಿಮಿತಿ ಅವಧಿಯನ್ನು ನಿರ್ದಿಷ್ಟವಾಗಿ ಉಪಬಂಧಿಸಲು ಸ್ಪಷ್ಟವಾಗಿ ಉದ್ದೇಶಿಸಿರುವಲ್ಲಿ, ಅದನ್ನು ಅಂಥ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಗಳಲ್ಲಿ ಅನುಸರಿಸಬೇಕಾಗುವ ಕಾರ್ಯವಿಧಾನವನ್ನು ನಿಗದಿಪಡಿಸಲು, ಸರ್ಕಾರವು ತನ್ನ ನಿಯೋಜಿತ ಅಧಿಕಾರಗಳಡಿಯಲ್ಲಿ ಮಾಡಬೇಕಾದ ನಿಯಮಗಳಿಂದ ಉಪಬಂಧಿಸಲು, ಅದೇ ರೀತಿಯ ಕೆಲವು ಉಪಬಂಧಗಳ ಅಡಿಯಲ್ಲಿನ ಕ್ಲೇಮುಗಳಿಗೆ ಸಂಬಂಧಿಸಿದ ಅಂಥ ವಿಷಯಗಳನ್ನು ಬಿಟ್ಟುಬಿಡಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ ಎಂದು ನಮಗೆ ಕಂಡುಬಂದಿರುತ್ತದೆ ".

-ಎಂದು ನ್ಯಾಯಾಲಯವು ತೀರ್ಮಾನಿಸುವಾಗ, ನಿಯಮಗಳ ಅಡಿಯಲ್ಲಿ ಪರಿಹಾರದ ರದ್ದಿಯಾತಿಯು ಅನುಮತೀಯವಲ್ಲವೆಂದು ಅಭಿಪ್ರಾಯಪಟ್ಟಿದೆ.

ಹೀಗೆ ತೀರ್ಮಾನಿಸುವಾಗ, ಒಂದು ವಿಷಯವನ್ನು ಪುರಸ್ಕರಿಸುವುದನ್ನು ಪ್ರತಿಬಂಧಿಸುವ ಅಧಿಕಾರವನ್ನು ವ್ಯವಹರಣೆಗಳನ್ನು ನಡೆಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವ ಅಧಿಕಾರವೆಂದು ಓದಲಾಗುವುದಿಲ್ಲ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ವಿಧಿಸಲಾದ ಕಾನೂನು ಮತ್ತು ಮಾಡಲಾದ ಅಭಿಪ್ರಾಯಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.ಪ್ರಶ್ನಿತ ನಿಯಮಗಳು ಕೇವಲ ಪ್ರಕ್ರಿಯಾತ್ಮಕ ನಿಯಮಗಳಾಗಿದ್ದು, ಅವುಗಳನ್ನು ಶಾಸಕಾಂಗದ ಉದ್ದೇಶವನ್ನು ಕಾರ್ಯಗತಗೊಳಿಸಲು, ಕಾರ್ಯವಿಧಾನವನ್ನು ಉಪಬಂಧಿಸಲು ಅರ್ಥೈಸಬಹುದೇ ಹೊರತು ಇನ್ನೇನೂ ಅಲ್ಲ. ಮಹಾರಾಷ್ಟ್ರ ಸ್ಟೇಟ್ ಬೋರ್ಡ್ ಆಫ್ ಸೆಕೆಂಡರಿ ಅಂಡ್ ಹೈಯರ್ ಸೆಕೆಂಡರಿ ಎಜುಕೇಶನ್ (ಮೇಲೆ ಹೇಳದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯೋಕ್ತಿಗಳ ಮೇಲೆ ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ ರವರು ಅವಲಂಬಿಸಿರುವುದು ಬಹಳ ಸೂಕ್ತವಾಗಿದೆ:

C ಶಾಸಕಾಂಗವು ಸಾಮಾನ್ಯ ಕಾರ್ಯನೀತಿಯನ್ನು ಮಾತ್ರ ಪ್ರತಿಪಾದಿಸಲು ಆಯ್ಕೆ ಮಾಡಿಕೊಂಡು, ಸದರಿ ಕಾರ್ಯನೀತಿಯನ್ನು ಜಾರಿಗೆ ತರಲು ವಿವರವಾದ ಉಪಬಂಧಗಳನ್ನು ಕಲ್ಪಿಸಲು ಅದರ ಪ್ರತಿನಿಧಿಗೆ ಬಿಟ್ಟುಕೊಡಬಹುದು ಹಾಗೂ ಅಧೀನ ಶಾಸನದ ಸ್ವರೂಪದಲ್ಲಿರುವ ನಿಯಮಗಳು| ನಿಬಂಧನೆಗಳನ್ನು ರೂಪಿಸುವ ಮೂಲಕ ಶಾಸನದ ಉದ್ದೇಶಗಳನ್ನು ಜಾರಿಗೊಳಿಸಬಹುದು ಎಂಬುದು ಒಂದು ಸಾಮಾನ್ಯವಾದ ಕಾನೂನು ಪ್ರಕ್ರಿಯೆಯಾಗಿದೆ ...... ೨೨

ಅದೇ ರೀತಿಯಲ್ಲಿ, ಶಂಕರನಾರಾಯಣ ಕನ್ಸ್ಟ್ರಕ್ಷನ್ ಕಂ. ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು (2004) 270 ಐಟಿಆರ್ 356 ಮೊಕದ್ದಮೆಯಲ್ಲಿನ ತೀರ್ಪನ್ನು ಅವಲಂಬಿಸಿರುವುದರಿಂದ ಸಹ ಯಾವುದೇ ಪ್ರಯೋಜನವಾಗಿಲ್ಲ.ಶಾಸನದ ಭಾಷೆ ಸ್ಪಷ್ಟ ಮತ್ತು ಅಸ್ಪಷ್ಟವಾಗಿರುವಲ್ಲಿ, ಅಂತರ್ಗತ ವಿಷಯ (ಕ್ಯಾಸಸ್ ಒಮಿಸಸ್) ಎಂಬ ಸಿದ್ಧಾಂತವನ್ನು ಅನ್ವಯಿಸಲು ಯಾವುದೇ ಅವಕಾಶವಿಲ್ಲ ಎಂದು ಹೇಳಲಾಯಿತು.ಸದ್ಯದ ಪ್ರಕರಣದಲ್ಲಿ ಈ ಮೇಲೆ ಗಮನಿಸಲಾದಂತೆ, ನಿಯಮಗಳು ಯಾವುದೇ ರೀತಿಯಲ್ಲಿ ಪದಗಳನ್ನು ಶಾಸನದಲ್ಲಿ ಸೇರಿಸುವ ಪರಿಣಾಮವನ್ನು ಹೊಂದಿರುವುದಿಲ್ಲ.ಸಭೆ ಕರೆಯುವಲ್ಲಿ ವಿಭಾಗಾಧಿಕಾರಿಗೆ ತಮ್ಮ ಪಾತ್ರವನ್ನು ನಿರ್ವಹಿಸಲು ಅವಕಾಶ ನೀಡುವ ಮೂಲಕ ಅವುಗಳನ್ನು ಬಿಟ್ಟುಬಿಡಲಾಗಿತ್ತು.ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಹಕ್ಕುಗಳನ್ನು ನೀಡುವ ಶಾಸಕಾಂಗ ನೀತಿಯನ್ನು ಅನುಷ್ಠಾನಗೊಳಿಸುವ ಕಾರ್ಯವಿಧಾನಕ್ಕೆ ಮಾತ್ರ ನಿಯಮಗಳು ಅವಕಾಶ ನೀಡುತ್ತವೆ.ಕಾರ್ಯ ವಿಧಾನದ ಅಂತಹ ನಿಯಮನವು ಕಾನೂನುಬದ್ಧವಾಗಿ ಸಮರ್ಥಿಸಲ್ಪಟ್ಟಿದೆ.

16. ಅಧಿನಿಯಮದ 49 ( 1) ನೇ ಪ್ರಕರಣವು " ಗೊತ್ತುಪಡಿಸಬಹುದಾದಂತಹ ಕಾರ್ಯವಿಧಾನಕ್ಕೆ ಅನುಗುಣವಾಗಿ " ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಉಪಬಂಧಿಸುತ್ತದೆ ಮತ್ತು ಅಂತಹ ಕಾರ್ಯವಿಧಾನವನ್ನು ಅಧಿನಿಯಮದ 52 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾಗಿದ್ದು, ಅದು ಸಭೆಯನ್ನು ಹೇಗೆ ಕರೆಯಬೇಕು ಎಂಬುದನ್ನು ನಿರ್ದಿಷ್ಟಪಡಿಸುತ್ತದೆ ಎಂದು ವಾದಿಸಲಾಗಿದೆ.ಸದರಿ ವಾದವು ತಿರಸ್ಕರಿಸಲು ತಕ್ಕುದಾಗಿದೆ.ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಸಭೆ ಕರೆಯುವ ಪ್ರಕ್ರಿಯೆಯು ಅರ್ಧಕ್ಕಿಂತ ಕಡಿಮೆಯಿಲ್ಲದೆ ಸದಸ್ಯರು ಸಹಿ ಮಾಡಿದ ನಿರ್ಣಯದ ನೋಟೀಸಿನ ಮೂಲಕ ನಡೆಯುತ್ತದೆ.ಅದು ಮೊದಲು ಹತ್ತುದಿನಗಳ ನೋಟೀಸಿನೊಂದಿಗೆ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗವಾಗಿತ್ತು

ಎಂಬುದನ್ನು ಗಮನಿಸಬೇಕಿದೆ.ಆದಾಗ್ಯೂ, ಅಧಿನಿಯಮದ 52 ನೇ ಪ್ರಕರಣವು ಒಟ್ಟು ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಮತ್ತು ಹದಿನೈದು ದಿನಗಳೊಳಗಾಗಿ ಲಿಖಿತ ಕೋರಿಕೆಯ ಮೇರೆಗೆ ಸಭೆ ನಡೆಸಲು ಉಪಬಂಧಿಸುತ್ತದೆ.ಅಧಿನಿಯಮದ 49 ನೇ ಪ್ರಕರಣ ಮತ್ತು 52 ನೇ ಪ್ರಕರಣದ ಅಡಿಯಲ್ಲಿ ನಿಗದಿತವಾದ ಕಾರ್ಯವಿಧಾನದಲ್ಲಿನ ಸ್ಪಷ್ಟ ವಿರೋಧಾಭಾಸವು, ಅಧಿನಿಯಮದ 49 ನೇ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದಂತೆ ನಿಗದಿಪಡಿಸಲಾದ ಕಾರ್ಯವಿಧಾನವು ಅಧಿನಿಯಮದ 52 ನೇ ಪ್ರಕರಣದ ಅಡಿಯಲ್ಲಿನ ಕಾರ್ಯವಿಧಾನವಾಗಿರಲು ಸಾಧ್ಯವಿಲ್ಲ ಎಂಬುದನ್ನು ಸ್ವತಃ ಸೂಚಿಸುತ್ತದೆ.ಒಂದು ಅಧಿನಿಯಮದ ಮೂಲ ಉಪಬಂಧಗಳು ಪರಸ್ಪರ ವಿರೋಧಾಭಾಸವಾಗಿವೆಯೆಂದು ಭಾವಿಸಲಾಗುವುದಿಲ್ಲ ಎಂಬ ಅರ್ಥವಿವರಣೆಯ ಸುಸ್ಥಾಪಿತವಾದ ನಿಯಮವೂ ಸಹ ಆಗಿದೆ. ಅದರಂತೆ, ನಿಗದಿಪಡಿಸಿದ ಕಾರ್ಯವಿಧಾನವು ಅಧಿನಿಯಮದ 52 ನೇ ಪ್ರಕರಣದ ಅಡಿಯಲ್ಲಿನ ಕಾರ್ಯ ವಿಧಾನವನ್ನು ಸೂಚಿಸುತ್ತದೆ ಎಂಬ ಅರ್ಜಿದಾರರ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

17. ಎಂ. ಮುನಿಯಪ್ಪ (ಮೇಲೆ ಹೇಳದ) ಮೊಕದ್ದಮೆಯಲ್ಲಿ, ಸರಿಯಾಗಿಯೇ ತೀರ್ಮಾನಿಸಿರುವಂತೆ, ಅಧಿನಿಯಮದ 49 ನೇ ಪ್ರಕರಣವು ಅದರ ನಿಯಮಗಳೊಂದಿಗೆ ಸ್ವಯಂ ಸಂಪೂರ್ಣವಾದ ಸಂಹಿತೆಯಾಗಿದೆ ಮತ್ತು ಅದು ಹಾಗಿದ್ದಲ್ಲಿ, ನಿಯಮಗಳ ಅಡಿಯಲ್ಲಿ ವಿವರಿಸಿರುವಂತೆ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ನಿಗದಿಪಡಿಸಲಾದ ಕಾರ್ಯವಿಧಾನವು ಸ್ವಯಂ ಸಂಪೂರ್ಣವಾಗಿದೆ ಹಾಗೂ ಅಧಿನಿಯಮದ 52 ನೇ ಪ್ರಕರಣ ಅಥವಾ 62 ನೇ ಪ್ರಕರಣದ ಅಡಿಯಲ್ಲಿ ನಿಗದಿಪಡಿಸಲಾದ ಕಾರ್ಯವಿಧಾನದ ಮೇಲೆ ಅವಲಂಬಿತವಾಗುವ ಪ್ರಶ್ನೆಯೇ ಇಲ್ಲ.

18. 52 ನೇ ಪ್ರಕರಣವು ವ್ಯವಹಾರದ ವಹಿವಾಟನ್ನು ಯೋಜಿಸುತ್ತದೆ ಮತ್ತು 62 ನೇ ಪ್ರಕರಣವು ಇತರ ಉದ್ದೇಶಗಳಿಗಾಗಿ ಸಭೆ ಕರೆಯುವುದನ್ನು ಯೋಜಿಸುತ್ತದೆ.ಅದು ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಸಭೆ ಕರೆಯುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ ಎಂಬುದನ್ನು ಸಹ ಗಮನಿಸಬೇಕಿದೆ.ವಾಸ್ತವವಾಗಿ, ತಾಲ್ಲೂಕು ಪಂಚಾಯತ್ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಸಂಬಂಧಿಸಿದ ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಕಾರ್ಯವಿಧಾನಕ್ಕೆ ಸಂಬಂಧಪಡುವ ಅಧಿನಿಯಮದ 141 ( 6) ನೇ ಪ್ರಕರಣಕ್ಕಿಂತ ಭಿನ್ನವಾಗಿ ಹಾಗೂ ಜಿಲ್ಲಾ ಪಂಚಾಯತ್ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಉಪಬಂಧಿಸುವ ಅಧಿನಿಯಮದ 180 ( 6) ನೇ ಪ್ರಕರಣವು ಅಧ್ಯಕ್ಷ ಮತ್ತು ಸಂದರ್ಭಾನುಸಾರವಾಗಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸುವ ಸಭೆಗೆ ನಿರ್ದಿಷ್ಟವಾಗಿ ಅವಕಾಶ ಕಲ್ಪಿಸುತ್ತದೆ.ಗ್ರಾಮಪಂಚಾಯಿತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದ ಅಧಿನಿಯಮದ 49 ನೇ ಪ್ರಕರಣವು ಅಂತಹ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಬೇಕು?ಎಂಬ ಬಗ್ಗೆ ಸಂಪೂರ್ಣವಾಗಿ ಮೌನವಾಗಿದೆ.ಅಧಿನಿಯಮದ 49 ( 1) ನೇ ಪ್ರಕರಣವು ನಿಗದಿಪಡಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ, ಆ ಉದ್ದೇಶಕ್ಕಾಗಿ ವಿಶೇಷವಾಗಿ ಸಮಾವೇಶಗೊಳಿಸಿದ ಸಭೆಯಲ್ಲಿ ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸಬಹುದು ಎಂದು ಷರತ್ತು ವಿಧಿಸುತ್ತದೆ.ರೂಪಿಸಲಾದ ನಿಯಮಗಳು D ' ವಿಭಾಗಾಧಿಕಾರಿಯು ಸಭೆ ' ಕರೆಯುವ ಕಾರ್ಯವಿಧಾನವನ್ನು ಉಪಬಂಧಿಸುತ್ತವೆ ಮತ್ತು ಆದ್ದರಿಂದ, ನೀಡಲಾದ ಅಧಿಕಾರಕ್ಕೆ ಅನುಗುಣವಾಗಿ ನಿಯಮಗಳನ್ನು ರೂಪಿಸಲಾಗಿದೆ ಮತ್ತು ಅದು ಅಧಿನಿಯಮದ ಅಧಿಕಾರಕ್ಕೆ ಮೀರಿದ್ದಾಗಿದೆ ಎಂದು

ಹೇಳಲಾಗದು.ತದನುಸಾರವಾಗಿ, ಮೂಲ ಅಧಿನಿಯಮದ ಅಧಿಕಾರಕ್ಕೆ ಮೀರಿರುವಂತೆ ರಚಿಸಲಾದ ನಿಯಮಗಳನ್ನು ವಿರೋಧಿಸುವ ಅರ್ಜಿದಾರನ ಎಲ್ಲಾ ವಾದಗಳು ತಿರಸ್ಕರಿಸಲು ಅರ್ಹವಾಗಿವೆ.

19. ಸದ್ಯದ ನಿರ್ದಿಷ್ಟ ಪ್ರಕರಣದಲ್ಲಿ ನಿಯಮಗಳನ್ನು ಪಾಲಿಸದಿರುವ ಬಗ್ಗೆ ಯಾವುದೇ ವಿವಾದಗಳಿಲ್ಲ ಮತ್ತು ಅದರ ಪ್ರಕಾರ, ಈಗ ಸಿಂಧುವಾಗಬೇಕೆಂದು ತೀರ್ಮಾನಿಸಲಾದ ನಿಯಮಗಳಿಗೆ ಸಂಬಂಧಿಸಿದಂತೆ, ಪ್ರಕರಣದ ಸಂಗತಿಗಳಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ವಾದವನ್ನು ಸಮರ್ಥಿಸಿಲ್ಲ.

ತದನುಸಾರವಾಗಿ, ಮೇಲ್ಕಂಡ ಅಭಿಪ್ರಾಯಗಳಿಗೆ ಒಳಪಟ್ಟು, ಈ ಅರ್ಜಿಯನ್ನು ತಿರಸ್ಕರಿಸಲಾಗಿದೆ.